SEVA BHARATHI
सेवा ही परमो धर्मः

ಆಗಸ್ಟ್ - 2026
ಸಂಚಿಕೆ - 08
ಸಂಪುಟ - 07

ಮಾಸಿಕ e - ನ್ಯೂಸ್ ಲೆಟರ್

# ಸೇವಾಪಥ

ಸೇವಾಭಾರತಿ (ರಿ.), ಬೆಳ್ತಂಗಡಿ ತಾ||
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ -2022)



ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ - II ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ - 574216






## ಕನ್ಯಾಡಿ ಸೇವಾನಿಕೇತನ ಮೊದಲ ಮಹಡಿಯ ಪ್ರವೇಶೋತ್ಸವ

## ಕನ್ಯಾಡಿ ಸೇವಾನಿಕೇತನದಲ್ಲಿ ವರಮಹಾಲಕ್ಷ್ಮೀ ವ್ರತ ಪೂಜೆ

## “ನೆರವಿನ ನೆರಳು” ಕಾರ್ಯಕ್ರಮಕ್ಕೆ ಬೆಳ್ತಂಗಡಿ ಶಾಸಕರಿಗೆ ಆಹ್ವಾನ

## ಸೇವಾಧಾಮ ನೂತನ ಕಟ್ಟಡಕ್ಕೆ ಧನಸಹಾಯ ನೀಡುವಂತೆ ಮನವಿ

## ಸೋಲಿನಲ್ಲೂ ಗೆಲುವಿನ ಹಾದಿಯನ್ನು ಕಂಡುಕೊಂಡಂತಹ ಚಿಕ್ಕಮಗಳೂರಿನ ಶ್ರೀ ಕೃಷ್ಣ ಶೆಟ್ಟಿಯವರ ಯಶೋಗಾಥೆ

ಯಶೋಗಾಥೆ

Mob,9945491241 I E-mail : sevabharathikanyady@gmail.com I Website : www.sevabharathi.org

## ನಮ್ಮಿಂದಿಷ್ಟು

**ತಮಗೆಲ್ಲರಿಗೂ ನಮಸ್ಕಾರಗಳು**

ಮೊದಲ ಮಹಡಿಯ ಕೆಲಸ ಬಹುತೇಕ ಮುಗಿದು, ಅಧಿಕೃತ ಉದ್ಘಾಟನೆಗೆ ಸಿದ್ಧವಾಗಿದೆ. LIC of India ಮತ್ತು NMPA ಗಳ CSR ನಿಧಿಯಡಿ ನಿರ್ಮಾಣಗೊಂಡ ಮಹಡಿ ಇದಾಗಿದೆ. ಈ ವರ್ಷದ 20ನೇ ಶ್ರೀ ವರಮಹಾಲಕ್ಷ್ಮಿ ವ್ರತ ಪೂಜೆಯನ್ನು ಇದೇ ಮಹಡಿಯಲ್ಲಿ ನೆರವೇರಿಸಿರುವುದು ಒಂದು ಧನ್ಯತೆಯ ಕ್ಷಣವಾಗಿದೆ.

ಸೆಪ್ಟೆಂಬರ್ ತಿಂಗಳ ಕೊನೆಯ ವೇಳೆಗೆ ಎರಡನೇ ಮಹಡಿಯ ಕೆಲಸವೂ ಪೂರ್ಣಗೊಂಡು, ಉದ್ಘಾಟನೆಗೆ ಸಿದ್ಧವಾಗಲಿದೆ. ಈ ಎರಡೂ ಮಹಡಿಗಳು ಪುನಶ್ಚೇತನ ಕೇಂದ್ರದ ಪ್ರಮುಖ ಮಹಡಿಗಳಾಗಿದ್ದು, ಮೂರನೇ ಮಹಡಿಯ ನಿರ್ಮಾಣ ಕಾರ್ಯಕ್ಕಾಗಿ ಧನಸಂಗ್ರಹ ಕಾರ್ಯ ಮುಂದುವರಿದಿದೆ.

ಮುಂದಿನ ತಿಂಗಳು, ಅಂದರೆ ಸೆಪ್ಟೆಂಬರ್ 5ರಂದು, ಅಂತರಾಷ್ಟ್ರೀಯ ಬೆನ್ನುಹುರಿ ಅಪಘಾತಕ್ಕೊಳಗಾದವರ ದಿನಾಚರಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಮಾಹಿತಿ ಶಿಬಿರಗಳು, ಸಾಧಕರಿಗೆ ಗೌರವಾರ್ಪಣೆ, ಗಾಲಿಕುರ್ಚಿ ಜಾಥ, ಸಾಧಕರೊಂದಿಗೆ ಸಂವಾದ, ಆರೋಗ್ಯ ತಪಾಸಣಾ ಶಿಬಿರಗಳು, ಸಾಧನಾ ಸಲಕರಣೆಗಳ ವಿತರಣೆ ಹಾಗೂ ಸರ್ಕಾರಕ್ಕೆ ವಿವಿಧ ಬೇಡಿಕೆಗಳ ಸಲ್ಲಿಕೆಯಂತಹ ಕಾರ್ಯಕ್ರಮಗಳು ಕೇವಲ ಒಂದು ದಿನಕ್ಕೆ ಸೀಮಿತವಾಗದೆ, ಇಡೀ ಸೆಪ್ಟೆಂಬರ್ ತಿಂಗಳಾದ್ಯಂತ ನಡೆಯಲಿವೆ.

ಅದರಂತೆ, ನಮ್ಮ ಬೆಳ್ತಂಗಡಿ ತಾಲೂಕಿನ ಧಾರ್ಮಿಕ ಮುಖಂಡರು ಹಾಗೂ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಕಿರಣ್ ಚಂದ್ರ ಡಿ. ಪುಷ್ಪಗಿರಿಯವರು, ತಮ್ಮ ತಾಯಿ, ನಿವೃತ್ತ ಶಿಕ್ಷಕಿಯಾದ ಶ್ರೀದೇವಿಯವರ ಐದನೇ ವರ್ಷದ ಪುಣ್ಯಸ್ಮರಣೆಯ ಅಂಗವಾಗಿ, ಸೆಪ್ಟೆಂಬರ್ 5ರಂದು ಉಜಿರೆಯಲ್ಲಿ ಬೆಳ್ತಂಗಡಿ ತಾಲೂಕಿನ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕಿಟ್‌ಗಳು ಹಾಗೂ ಅಗತ್ಯ ಸಾಧನ-ಸಲಕರಣೆಗಳನ್ನು ವಿತರಿಸುವ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ.

ಈ ಭಾಗದ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ವಿಶೇಷ ರೀತಿಯಲ್ಲಿ ಸಹಾಯಕವಾಗುವಂತಹ ಯೋಜನೆ ಇದಾಗಿದೆ. ಅದೇ ದಿನ ಶಿಕ್ಷಕರ ದಿನಾಚರಣೆಯೂ ನಡೆಯಲಿರುವುದು ಈ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರಗು ನೀಡಲಿದೆ.

ಸೆಪ್ಟೆಂಬರ್ 14ರಂದು ಗಣೇಶ ಚತುರ್ಥಿಯ ಪ್ರಯುಕ್ತ, ತಮಗೆಲ್ಲರಿಗೂ ಶ್ರೀ ಗಣಪತಿ ದೇವರು ಆಯುರಾರೋಗ್ಯ, ಸುಖ-ಶಾಂತಿ ಹಾಗೂ ಸಮೃದ್ಧಿಯನ್ನು ಸದಾ ಕರುಣಿಸಲಿ ಎಂದು ಹಾರೈಸುತ್ತೇವೆ.



**ಸೇವಾ ಹಿ ಪರಮೋ ಧರ್ಮಃ**

ವಂದನೆಗಳೊಂದಿಗೆ

**ತಮ್ಮವ**

**ಕೆ. ವಿನಾಯಕ ರಾವ್**

## ಜುಲೈ ತಿಂಗಳ ಸೇವಾಪಥ ಬಿಡುಗಡೆ




**ಕನ್ಯಾಡಿ ಸೇವಾಭಾರತಿಯ ಜುಲೈ ತಿಂಗಳ ಸೇವಾಕಾರ್ಯಗಳ ಇ-ನ್ಯೂಸ್‌ಲೆಟರ್ 'ಸೇವಾಪಥ'ವನ್ನು ಶ್ರೀ ದುರ್ಗಾ ಮಾತೃ ಮಂಡಳಿಯ ಸದಸ್ಯರಾದ ಹಾಗೂ ಸಂಸ್ಥೆಯ ಸೇವಾನಿಧಿ ದಾನಿಗಳಾದ ಕನ್ಯಾಡಿಯ ಶ್ರೀಮತಿ ಸವಿತಾ ಎಂ ರಾವ್ ರವರು ಬಿಡುಗಡೆಗೊಳಿಸಿರುತ್ತಾರೆ**

### ನಮ್ಮ ವಿಳಾಸ :

**ಪ್ರಧಾನ ಕಚೇರಿ**

**ಸೇವಾನಿಕೇತನ, ಕನ್ಯಾಡಿ - II ,ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು 574 216 : 99454 91241**

### ಸೇವಾ ಕೇಂದ್ರ :

**ಸೇವಾಧಾಮ ಸೌತಡ್ಕ**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ ಕೊಕ್ಕಡ ಗ್ರಾಮ
574 198 : 94482 54888**

**ಸೇವಾಧಾಮ ಬೈಂದೂರು**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಒತ್ತಡ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರ) ಹೇನಬೇರು ಬೈಂದೂರು, ಪಡುವರಿ ಅಂಚೆ ಮತ್ತು ಗ್ರಾಮ, ಬೈಂದೂರು ತಾಲೂಕು, ಉಡುಪಿ ಜಿಲ್ಲೆ - 576214 : 99010 44895**

### ನಮ್ಮ ತಂಡ :

| | | |
|---|---|---|
| ಶ್ರೀ ಕೆ. ವಿನಾಯಕ ರಾವ್ | - | ಅಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | - | ಉಪಾಧ್ಯಕ್ಷರು |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | - | ಕಾರ್ಯದರ್ಶಿ |
| ಶ್ರೀ ಜಯರಾಜ್ ಸಾಲ್ಯಾನ್ | - | ಖಜಾಂಚಿ |
| ಶ್ರೀಮತಿ ಸ್ವರ್ಣಗೌರಿ | - | ಟ್ರಸ್ಟಿ |
| ಶ್ರೀ ಕೆ. ಯು. ಗಿರೀಶ್ ರಾವ್ | - | ಟ್ರಸ್ಟಿ |
| ಶ್ರೀ ಪೃಥ್ವೀಶ | - | ಟ್ರಸ್ಟಿ |

### ಸಲಹಾ ಮಂಡಳಿ :

**ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಡಾ. ಎ. ಜಯಕುಮಾರ್ ಶೆಟ್ಟಿ
ಶ್ರೀ ಸುಮಂತ್ ಕುಮಾರ್ ಜೈನ್**

### ಸಂಚಾಲಕರು :

| | | |
|---|---|---|
| ಶ್ರೀ ಕೆ. ಪುರಂದರ ರಾವ್ | - | ಸೇವಾಧಾಮ |
| ಶ್ರೀಮತಿ ಮಮತಾ ಬೊಲ್ಮ | - | ಸಬಲಿನಿ |
| ಶ್ರೀ ಅಖಿಲೇಶ್ ಶೆಟ್ಟಿ, ನೇತ್ರಾವತಿ | - | ಆರೋಗ್ಯಮ್ |

# ಕನ್ಯಾಡಿ ಸೇವಾನಿಕೇತನ ಮೊದಲ ಮಹಡಿಯ ಪ್ರವೇಶೋತ್ಸವ






ಕನ್ಯಾಡಿ ಸೇವಾನಿಕೇತನ ಪ್ರಧಾನ ಕಾರ್ಯಾಲಯದ ಮೊದಲ ಮಹಡಿಯ ಪ್ರವೇಶೋತ್ಸವದ ಅಂಗವಾಗಿ 19/08/2026, ಬುಧವಾರದಂದು ವಾಸ್ತು ಪೂಜೆ ಮತ್ತು 20/08/2026, ಗುರುವಾರದಂದು ಮೊದಲ ಮಹಡಿಯ ಪ್ರವೇಶ ಕಾರ್ಯಕ್ರಮವನ್ನು ನಡೆಸಲಾಯಿತು. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ನೂತನ ಮೊದಲ ಮಹಡಿಯಲ್ಲಿ ಫಿಸಿಯೋಥೆರಫಿ ವ್ಯವಸ್ಥೆ ಕಲ್ಪಿಸಲಾಗುವುದು. ಇಲ್ಲಿ ದಿವ್ಯಾಂಗರಿಗೆ ಪುನಶ್ಚೇತನ ನೀಡುವ ಮೂಲಕ ಅವರ ಆರೋಗ್ಯ, ಚಲನವಲನ ಮತ್ತು ಸ್ವಾವಲಂಬನೆಗೆ ಸಹಕಾರಿಯಾಗಲಿದೆ. ಸೇವಾನಿಕೇತನದ ಸೇವಾ ಕಾರ್ಯಗಳಿಗೆ ಮತ್ತಷ್ಟು ಬಲ ನೀಡುವ ಈ ನೂತನ ವ್ಯವಸ್ಥೆಯು ಫಲಾನುಭವಿಗಳಿಗೆ ಉತ್ತಮ ಸೇವೆ ಒದಗಿಸಲು ಸಹಕಾರಿಯಾಗಲಿದೆ.

## ಕಾನರ್ಪದ ಶ್ರೀ ದಿನೇಶ್ ಪೂಜಾರಿರವರಿಂದ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ರೂ. 2,000/- ದೇಣಿಗೆ




**ಸೌತಡ್ಕ (ಆಗಸ್ಟ್ : 12):** ಬೆಳ್ತಂಗಡಿ ತಾಲೂಕಿನ ಕಾನರ್ಪದ ಶ್ರೀ ದಿನೇಶ್ ಪೂಜಾರಿ ಹಾಗೂ ಅವರ ಕುಟುಂಬಸ್ಥರು ಸೌತಡ್ಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ, ಸೇವಾಧಾಮಕ್ಕೆ ಆಗಸ್ಟ್ 12 ರಂದು ಭೇಟಿ ನೀಡಿ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂ. 2,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸೇವಾಧಾಮದ ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ಮರಿಯಪ್ಪ ರವರು ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಜೋಡುಸ್ಥಾನದ ಶ್ರೀಮತಿ ಮೀನಾಕ್ಷಿ ಜಿ ಭಟ್ ರವರಿಂದ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ದೇಣಿಗೆ :



**ಕನ್ಯಾಡಿ (ಆಗಸ್ಟ್ 24):** ಧರ್ಮಸ್ಥಳ ಗ್ರಾಮದ ಜೋಡುಸ್ಥಾನದ ಶ್ರೀಮತಿ ಮೀನಾಕ್ಷಿ ಜಿ ಭಟ್ ಹಾಗೂ ಅವರ ಕುಟುಂಬಸ್ಥರು ಆಗಸ್ಟ್ 24ರಂದು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿ ಅವರ ಪುತ್ರಿಯರಾದ ಶ್ರೀಮತಿ ಅನುರಾಧಾ ಹಾಗೂ ಶ್ರೀಮತಿ ಚೈತ್ರಾ, ಎಂ. ರವರ ಹುಟ್ಟುಹಬ್ಬದ ಪ್ರಯುಕ್ತ ರೂ. 2,000/- ದೇಣಿಗೆಯನ್ನು ಸೌತಡ್ಕದ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ನೀಡಿದರು. ಇದರೊಂದಿಗೆ 20 ಕೆ.ಜಿ. ಅಕ್ಕಿಯನ್ನು ಸಹ ಸಂಸ್ಥೆಗೆ ನೀಡುವ ಮೂಲಕ ಸಹಕರಿಸಿದರು. ಸಂಸ್ಥೆಯ ಪರವಾಗಿ ದೇಣಿಗೆ ಹಾಗೂ ಅಕ್ಕಿಯನ್ನು ಸ್ವೀಕರಿಸಿ, ಶುಭಹಾರೈಸಲಾಯಿತು

## ಕನ್ಯಾಡಿ ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ನೀಡಿದ ನವ ಜೋಡಿಗಳು



**ಉಜಿರೆ (ಆಗಸ್ಟ್ 26)**: ಉಜಿರೆಯ ಪದ್ಮಶ್ರೀ ಎಂಟರ್‌ಪ್ರೈಸಸ್‌ನ ಮಾಲಕರಾದ ಶ್ರೀ ಪದ್ಮನಾಭ ಶೆಟ್ಟಿಗಾರ್ ಅವರ ಪುತ್ರಿಯ ಶುಭ ವಿವಾಹದ ಸಂದರ್ಭದಲ್ಲಿ, ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 25,000/- ದೇಣಿಗೆ ನೀಡಿ ಸಹಕರಿಸಿದರು. ಈ ಸಂದರ್ಭದಲ್ಲಿ ಶ್ರೀಯುತರು ಶ್ರೀ ಕೆ. ವಿನಾಯಕ ರಾವ್ ಅವರ ನಿಸ್ವಾರ್ಥ ಸೇವೆ ಹಾಗೂ ಸೇವಾಭಾರತಿಯ ಸಮಾಜಮುಖಿ ಕಾರ್ಯಗಳನ್ನು ಹೃತ್ಪೂರ್ವಕವಾಗಿ ಪ್ರಶಂಸಿಸಿ ಗೌರವಿಸಿದರು. ಸೇವಾಭಾರತಿಯ ಅಧ್ಯಕ್ಷರು ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಅವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ, ನವವಧುವರರಿಗೆ ಶುಭಹಾರೈಸಿ ಧನ್ಯವಾದವಿತ್ತರು.

## ಸೇವಾಭಾರತಿ ತಂಡದಿಂದ ಶ್ರೀ ಮುರಲಿ ಕಡೆಕಾರ್ ರವರ ಭೇಟಿ



**(ಆಗಸ್ಟ್ 07:)** ಉಡುಪಿಯ ಯಕ್ಷಗಾನ ಕಲಾರಂಗದ ಕಾರ್ಯದರ್ಶಿಗಳಾದ ಶ್ರೀ ಮುರಲಿ ಕಡೆಕಾರ್ ಅವರನ್ನು ಸೇವಾಭಾರತಿ ತಂಡವು ಆಗಸ್ಟ್ 07 ರಂದು ಭೇಟಿ ಮಾಡಿ ಸೇವಾಭಾರತಿಯ ವಿವಿಧ ಸೇವಾಕಾರ್ಯಗಳು ಹಾಗೂ ಸೇವಾಧಾಮದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಸೇವಾಭಾರತಿಯ ವಿವಿಧ ಸೇವಾಕಾರ್ಯಗಳಿಗೆ ಪ್ರೋತ್ಸಾಹ ಹಾಗೂ ಸಹಕಾರ ನೀಡುವ ಉದ್ದೇಶದಿಂದ ಶ್ರೀಯುತರು ರೂ.10,000/-ದೇಣಿಗೆಯನ್ನು ನೀಡಿ ಸಹಕರಿಸಿದರು. ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ರವರುಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು. ಈ ಸಂದರ್ಭದಲ್ಲಿ ಸೇವಾಭಾರತಿಯ ಕಾರ್ಯದರ್ಶಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ ಹಾಗೂ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ಅವರು ಉಪಸ್ಥಿತರಿದ್ದರು.

## ಬಳ್ಳಾರಿಯ ಜೆ ಗೋವಿಂದ ಆಚಾರ್ ರವರಿಂದ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ರೂ. 1,000/- ದೇಣಿಗೆ



**ಸೌತಡ್ಕ (ಆಗಸ್ಟ್: 20):** ಬಳ್ಳಾರಿಯ ಶ್ರೀ ಜೆ ಗೋವಿಂದ ಆಚಾರ್ ರವರು ಆಗಸ್ಟ್ 20 ರಂದು ಸೌತಡ್ಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂ. 1,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸೇವಾಧಾಮದ ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ಮರಿಯಪ್ಪ ರವರು ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ವರಮಹಾಲಕ್ಷ್ಮೀ ವ್ರತ ಪೂಜೆ



**ಕನ್ಯಾಡಿ (ಆಗಸ್ಟ್ 21):** ಶ್ರೀ ದುರ್ಗಾ ಮಾತೃ ಮಂಡಳಿ ಹಾಗೂ ಕನ್ಯಾಡಿ ಸೇವಾಭಾರತಿ ನೇತೃತ್ವದಲ್ಲಿ ಆಗಸ್ಟ್ 21 ರಂದು ಕನ್ಯಾಡಿ ಸೇವಾನಿಕೇತನದ ಮೊದಲನೇ ಮಹಡಿಯಲ್ಲಿ ವರಮಹಾಲಕ್ಷ್ಮಿ ವ್ರತ ಪೂಜೆಯನ್ನು ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಮಹಿಳೆಯರು ಹಾಗೂ ಸದಸ್ಯರು ಪೂಜೆಯಲ್ಲಿ ಭಾಗವಹಿಸಿ, ವರಮಹಾಲಕ್ಷ್ಮಿ ದೇವಿಯ ಆರಾಧನೆ ಮತ್ತು ಪೂಜಾ ಕಾರ್ಯಕ್ರಮವನ್ನು ನೆರವೇರಿಸಿದರು. ಕಾರ್ಯಕ್ರಮವು ಭಕ್ತಿ ಮತ್ತು ಸಂಭ್ರಮದಿಂದ ನಡೆಯಿತು.

## "ನೆರವಿನ ನೆರಳು" ಕಾರ್ಯಕ್ರಮಕ್ಕೆ ಬೆಳ್ತಂಗಡಿ ಶಾಸಕರಿಗೆ ಆಹ್ವಾನ



ಕನ್ಯಾಡಿ ಸೇವಾಭಾರತಿ(ರಿ.) ಹಾಗೂ ಶ್ರೀದೇವಿ ಸೇವಾ ಪ್ರತಿಷ್ಠಾನ, ಪುಷ್ಪಗಿರಿ, ಉರುವಾಲು, ಬೆಳ್ತಂಗಡಿ ಇವರ ಸಹಯೋಗದಲ್ಲಿ ಸೆಪ್ಟೆಂಬರ್ 05, 2026 ರಂದು ಉಜಿರೆಯ ಕೃಷ್ಣಾನುಗ್ರಹ ಸಭಾಭವನದಲ್ಲಿ ನಡೆಯಲಿರುವ "ನೆರವಿನ ನೆರಳು" ಕಾರ್ಯಕ್ರಮದ ಅಂಗವಾಗಿ ವೈದ್ಯಕೀಯ ಕಿಟ್ ಹಾಗೂ ಸಾಧನ ಸಲಕರಣೆಗಳ ವಿತರಣಾ ಸಮಾರಂಭವನ್ನು ಆಯೋಜಿಸಲಾಗಿದೆ.

ಈ ಕಾರ್ಯಕ್ರಮಕ್ಕೆ ಬೆಳ್ತಂಗಡಿ ತಾಲೂಕಿನ ಮಾನ್ಯ ಶಾಸಕರಾದ ಶ್ರೀ ಹರೀಶ್ ಪೂಂಜ ರವರನ್ನು ಸಾಮಾಜಿಕ ಹಾಗೂ ಧಾರ್ಮಿಕ ಮುಖಂಡರಾದ ಶ್ರೀ ಕಿರಣ್ ಚಂದ್ರ ಡಿ. ಪುಷ್ಪಗಿರಿ, ಸೇವಾಭಾರತಿ ಅಧ್ಯಕ್ಷರು ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಹಾಗೂ ಸೇವಾಭಾರತಿ ಖಜಾಂಚಿ ಶ್ರೀ ಎ ಜೈರಾಜ್ ಸಾಲಿಯಾನ್ ರವರು ಆಗಸ್ಟ್ 31 ರಂದು ಭೇಟಿ ಮಾಡಿ ಆಹ್ವಾನ ಪತ್ರಿಕೆಯನ್ನು ನೀಡಿ ಕಾರ್ಯಕ್ರಮಕ್ಕೆ ಆಹ್ವಾನಿಸಿದರು.

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನನ್ನ ಹೆಸರು ಆನಂದ ಗೌಡ. ನಾನು ಕಡಬ ತಾಲೂಕಿನ ಕೊಡೆಂಕಿರ ಗ್ರಾಮದ ನಿವಾಸಿಯಾಗಿದ್ದೇನೆ. 27 ಸೆಪ್ಟೆಂಬರ್ 2024ರಂದು ತೋಟದಲ್ಲಿ ಅಡಿಕೆ ಮರದಿಂದ ಬಿದ್ದು ಬೆನ್ನುಹುರಿ ಅಪಘಾತಕ್ಕೊಳಗಾದೆ. ಯಾವುದೇ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳದೆ, ಕೇವಲ ಫಿಸಿಯೋಥೆರಪಿ ಚಿಕಿತ್ಸೆಯನ್ನು ಪಡೆಯುತ್ತಿದ್ದೆ.

ಇತ್ತೀಚೆಗೆ ಹೆಚ್ಚಿನ ಚಿಕಿತ್ಸೆಯ ಸಲುವಾಗಿ ಫಸ್ಟ್ ನ್ಯೂರೋ ಆಸ್ಪತ್ರೆಗೆ ತೆರಳಿದಾಗ, ಅಲ್ಲಿನ ವೈದ್ಯರಾದ ಡಾ. ರಂಜನ್ ಅವರು ಸೇವಾಧಾಮದ ಬಗ್ಗೆ ಮಾಹಿತಿ ನೀಡಿದರು. ಹಾಗಾಗಿ, ನಾವು ಸೇವಾಧಾಮವನ್ನು ಸಂಪರ್ಕಿಸಿ, ಅಲ್ಲಿನ ಚಿಕಿತ್ಸೆಯ ಬಗ್ಗೆ ಮಾಹಿತಿ ಪಡೆದುಕೊಂಡು, ಚಿಕಿತ್ಸೆಯನ್ನು ಪಡೆಯಲು ಇಲ್ಲಿಗೆ ಬಂದೆವು.

ಇಲ್ಲಿ ಸುಮಾರು ಒಂದೂವರೆ ತಿಂಗಳ ಕಾಲ ಚಿಕಿತ್ಸೆ ಪಡೆದುಕೊಂಡಿದ್ದು, ಇದೀಗ ನನ್ನ ಆರೋಗ್ಯದಲ್ಲಿ ತುಂಬಾ ಸುಧಾರಣೆ ಕಂಡುಬಂದಿದೆ. ವಿಶೇಷವಾಗಿ, ಕಾಲುಗಳಲ್ಲಿದ್ದ ಬಿಗಿತನವು ಬಹಳಷ್ಟು ಕಡಿಮೆಯಾಗಿದೆ. ಸೇವಾಧಾಮದ ಬಗ್ಗೆ ನನಗೆ ತುಂಬಾ ಒಳ್ಳೆಯ ಅಭಿಪ್ರಾಯವಿದೆ. ಇಲ್ಲಿನ ಸಿಬ್ಬಂದಿಯವರು ನಮ್ಮೊಂದಿಗೆ ತುಂಬಾ ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಾರೆ ಹಾಗೂ ಪ್ರತಿಯೊಬ್ಬರೂ ತುಂಬಾ ಕಾಳಜಿಯಿಂದ ಆರೈಕೆ ಮಾಡುತ್ತಾರೆ.

ಅದರಲ್ಲೂ, ವಿಖ್ಯಾತಿ ಮೇಡಂ ಅವರು ನೀಡುವ ಫಿಸಿಯೋಥೆರಪಿ ಚಿಕಿತ್ಸೆಯು ನಮಗೆ ಬಹಳಷ್ಟು ಪ್ರಯೋಜನಕಾರಿಯಾಗಿದೆ. ಅವರ ಮಾರ್ಗದರ್ಶನದಲ್ಲಿ ಪಡೆಯುವ ಫಿಸಿಯೋಥೆರಪಿಯನ್ನು ಮುಂದಿನ ದಿನಗಳಲ್ಲಿ ನಾವು ತುಂಬಾ ಮಿಸ್ ಮಾಡಿಕೊಳ್ಳುತ್ತೇವೆ.

ಸೇವಾಧಾಮದಲ್ಲಿ ದೊರೆತ ಚಿಕಿತ್ಸೆ, ಮಾರ್ಗದರ್ಶನ ಹಾಗೂ ಸಿಬ್ಬಂದಿಯವರ ಕಾಳಜಿಯಿಂದ ನನಗೆ ಆತ್ಮವಿಶ್ವಾಸ ಹೆಚ್ಚಾಗಿದೆ. ಮುಂದಿನ ದಿನಗಳಲ್ಲಿ ನನ್ನ ಜೀವನೋಪಾಯಕ್ಕಾಗಿ ಸ್ವಲ್ಪ ಜಾಗದಲ್ಲಿ ಕೃಷಿ ಮಾಡುವುದನ್ನು ನಿರ್ಧರಿಸಿದ್ದೇನೆ. ಸ್ವಾವಲಂಬಿಯಾಗಿ ಜೀವನ ನಡೆಸುವತ್ತ ಇದು ನನಗೆ ಒಂದು ಹೊಸ ಹೆಜ್ಜೆಯಾಗಲಿದೆ.

ಸೇವಾಧಾಮದಲ್ಲಿ ನನಗೆ ದೊರೆತ ಉತ್ತಮ ಚಿಕಿತ್ಸೆ, ಆರೈಕೆ ಹಾಗೂ ಸಹಕಾರಕ್ಕಾಗಿ ಎಲ್ಲಾ ಸಿಬ್ಬಂದಿಯವರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು.

**ಇತೀ ತಮ್ಮ ವಿಶ್ವಾಸಿ - ಶ್ರೀ ಆನಂದ ಗೌಡ. ಕಡಬ**

# ಸೇವಾನಿಕೇತನದಲ್ಲಿ ವಾರದ ಭಜನೆ



**ಶ್ರೀ ಭದ್ರಕಾಳಿ ಮಹಿಳಾ ಮತ್ತು ಮಕ್ಕಳ ಭಜನಾ ಮಂಡಳಿ, ಮಾರಿಗುಡಿ-ಕಿಲ್ಲೂರು**



**ಕೇಸರಿ ನಂದನ ಮಹಿಳಾ ಭಜನಾ ಮಂಡಳಿ ಪಣೆಕಲ್ಲು, ಬಂದಾರು**



**ಶ್ರೀ ಮತ್ತೂರು ಪಂಚಲಿಂಗೇಶ್ವರ ಭಜನಾ ಮಂಡಳಿ, ಚಾರ್ಮಾಡಿ**



**ಶ್ರೀ ಸದಾಶಿವ ರುದ್ರ ಭಜನಾ ಮಂಡಳಿ, ಸುರ್ಯ**

# ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆ







# ಪುನಶ್ಚೇತನದ ಹಾದಿಯಲ್ಲಿ ಚೈತನ್ಯ ತುಂಬುವ ಸೇವಾಧಾಮ







ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರದಲ್ಲಿ ದಿವ್ಯಾಂಗರಿಗೆ ಸಮಗ್ರ ಪುನಶ್ಚೇತನ ಸೇವೆಗಳು ಒದಗಿಸಲಾಗುತ್ತದೆ. ಫಿಸಿಯೋಥೆರಪಿ, ಆಕ್ಯುಪೇಶನಲ್ ಥೆರಪಿ, ಒತ್ತಡಗಾಯ ನಿರ್ವಹಣೆ, ವ್ಹೀಲ್ಚೇರ್ ಬಳಕೆ ತರಬೇತಿ,ಲೇಸರ್ ಥೆರಪಿ, ದೈನಂದಿನ ಜೀವನ ಕೌಶಲ್ಯಗಳ ಅಭ್ಯಾಸ, ಮಾನಸಿಕ ಬೆಂಬಲ ಹಾಗೂ ಕುಟುಂಬ ಸಮಾಲೋಚನೆಗಳ ಮೂಲಕ ವ್ಯಕ್ತಿಯ ಸ್ವಾವಲಂಬನೆಯನ್ನು ವೃದ್ಧಿಸಲಾಗುತ್ತದೆ. ಆರೋಗ್ಯ, ಆತ್ಮವಿಶ್ವಾಸ ಮತ್ತು ಗೌರವಯುತ ಜೀವನ ನಡೆಸಲು ಅಗತ್ಯವಾದ ಮಾರ್ಗದರ್ಶನವನ್ನು ಕೇಂದ್ರದ ಮೂಲಕ ನೀಡಲಾಗುತ್ತದೆ.

# ಸಮುದಾಯದಲ್ಲಿ ಸೇವಾಧಾಮದ ಹೆಜ್ಜೆಗಳು













ಸೇವಾಧಾಮವು ಕೇಂದ್ರದ ಸೇವೆಗಳನ್ನು ಸಮುದಾಯದ ಮಟ್ಟಕ್ಕೂ ವಿಸ್ತರಿಸುತ್ತದೆ. ಮನೆ ಭೇಟಿಗಳು, ಸಮುದಾಯ ಜಾಗೃತಿ ಚಟುವಟಿಕೆಗಳು, ಕುಟುಂಬ ಸದಸ್ಯರಿಗೆ ತರಬೇತಿ, ಒತ್ತಡಗಾಯ ನಿರ್ವಹಣೆ, ಸಹಾಯಕ ಸಾಧನಗಳ ಬಳಕೆಯ ಮಾರ್ಗದರ್ಶನ ಹಾಗೂ ಸಮಾಜದಲ್ಲಿ ಸಮಾನ ಭಾಗವಹಿಸುವಿಕೆಗೆ ಪ್ರೋತ್ಸಾಹ ನೀಡಲಾಗುತ್ತದೆ. ಶಿಕ್ಷಣ, ಉದ್ಯೋಗ, ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಸ್ವಾವಲಂಬಿ ಬದುಕಿನತ್ತ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರನ್ನು ಬೆಂಬಲಿಸುವ ಕಾರ್ಯವನ್ನು ಸಮುದಾಯದ ಸಹಭಾಗಿತ್ವದೊಂದಿಗೆ ಮುಂದುವರಿಸಲಾಗುತ್ತದೆ.

## ಸೇವಾಕಾರ್ಯಗಳ ಹಿನ್ನೋಟ

**SEVABHARATHI**

Sevabharathi Achievements in Nutshell
Up to 31 August 2026
District Covered
(Dakshina Kannada, Udupi, Chikkamagalur, Shivamogga, Uttar Kannada, Kodagu)

| Services Provided - Sevadhama Program | Number |
|---|---|
| Identified People with Spinal Cord Injury | 857 |
| Rehabilitated People with Spinal Cord Injury (PwSCI) | 292 |
| Medical Camps Held (Belthangady, Puttur, Sullia, Ujire, Koppa, Moodbidri, Thumbe, Mangalore, Kundapura, Karkala , Mudigere, Kumta, Sirsi, Hassan, Sringeri, Madikeri, Tarikere and Udupi) | 31 |
| Wheelchairs Distributed | 439 |
| Calipers Provided | 64 |
| Walkers given | 90 |
| Home Accessibility like (Ramp, Toilets Provided) | 52 |
| Assistance for Self Employment | 140 |
| Medical Intervention | 326 |
| Surgical Assistance | 16 |
| Hospital Visited (Including PHC, CHC, THC ) | 163 |
| Panchayats Visited | 100 |
| Medical/Self-Care Kits Distributed | 1992 |
| Grocery kit distributed | 343 |
| Solar Inverter | 46 |
| BP/Diabetic Machines | 107 |
| Taluk Covered | 48 |
| **Services Provided - Arogyam Program** | **Number** |
| Blood Donation Camp Organized | 105 |
| Unit's collected | 11,399 |
| Ambulance services | 427 |
| **Services Provided - Sabalini Program** | **Number** |
| Tailoring Camp | 37 |
| Womens Empowered | 1190 |

Sevadhama Premises provided Free by
Sri Mahaganapathy Seva Trust®, Southadka
Sevadhama Wound care and Rehabilitation center, Byndooru

### ಸೇವಾಧಾಮದ ಆಗಸ್ಟ್ ತಿಂಗಳ ಸೇವಾಕಾರ್ಯಗಳು

- **ಸೆಲ್ಫ್ ಕೇರ್ ಕಿಟ್ ವಿತರಣೆ - 38**
- **ಮೆಡಿಕಲ್ ಕಿಟ್ ವಿತರಣೆ - 20**
- **ಹೊಸ ಗುರುತಿಸುವಿಕೆ - 07**
- **ಕೇಂದ್ರದಲ್ಲಿ ಪುನಶ್ಚೇತನ ಪಡೆದುಕೊಳ್ಳುತ್ತಿರುವ ಸನಿವಾಸಿಗಳು**

  **ಸೌತಡ್ಕ ಸೇವಾಧಾಮ - 10**

  **ಬೈಂದೂರು ಸೇವಾಧಾಮ - 05**

## ಸೇವಾಸಂಗಮ

**9 ನೇ ವರ್ಷದ ಸಂಭ್ರಮದಲ್ಲಿ,**

**ಸೇವಾಸಂಗಮ**

**( ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಆನ್ಲೈನ್ ಕಾರ್ಯಾಗಾರ - 41 )**

**ಬೆಳ್ತಂಗಡಿ ತಾಲೂಕಿನವರಿಗಾಗಿ ಸಮಾವೇಶ**

ಸಂಪನ್ಮೂಲ ವ್ಯಕ್ತಿಗಳು

**ಶ್ರೀ ಡಿ ಕಿರಣ್ ಚಂದ್ರ ಪುಷ್ಪಗಿರಿ**
ಧಾರ್ಮಿಕ ಹಾಗೂ ಸಾಮಾಜಿಕ ಸೇವಾ ಮುಖಂಡರು

**ಶ್ರೀ ಕೆ. ವಿನಾಯಕ ರಾವ್**
ಅಧ್ಯಕ್ಷರು, ಸೇವಾಭಾರತಿ, ಸಂಸ್ಥಾಪಕರು, ಸೇವಾಧಾಮ

**ಶ್ರೀ ಚರಣ್ ಕುಮಾರ್ ಎಂ.**
ಹಿರಿಯ ಪ್ರಬಂಧಕರು, ಸೇವಾಭಾರತಿ

ದಿನಾಂಕ : 29/08/2026
ಸಮಯ : 4pm to 5pm
Live On : Google Meet
https://meet.google.com/xnw-amfd-vrvir

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ



ಶ್ರೀ ಕುಸುಮಾಧರ
ಕಾರ್ಯಕ್ರಮ ವ್ಯವಸ್ಥಾಪಕರು
9606044893



ಶ್ರೀ ಧನೇಂದ್ರ
ಕ್ಷೇತ್ರ ಸಂಯೋಜಕರು, ದಕ್ಷಿಣಕನ್ನಡ
9901596624

ಸೇವಾಭಾರತಿ(ರಿ.), ಕನ್ಯಾಡಿ -II
9945491241
www.sevaabharathi.org

### ಸೇವಾ ಚಟುವಟಿಕೆಗಳ ಕುರಿತು ಮಾಹಿತಿ

- ಗಾಲಿಕುರ್ಚಿ ಜಾಥಾ
- ಸಾಧನ ಸಲಕರಣೆಗಳ ಅಸೆಸ್ಮೆಂಟ್
- ಕಿಟ್ ಗಳು ಮತ್ತು ಸಾಧನ ಸಲಕರಣೆಗಳ ವಿತರಣೆ
- ಬೆಳ್ತಂಗಡಿ ಬೆನ್ನುಹುರಿ ಅಪಘಾತಕ್ಕೊಳಗಾದವರ ಸಮಗ್ರ ಅಭಿವೃದ್ಧಿಗಾಗಿ ಸಂಘಟನಾತ್ಮಕ ಪ್ರಯತ್ನ




ಆಗಸ್ಟ್ ತಿಂಗಳ ಸೇವಾಸಂಗಮ ಆನ್ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಬೆಳ್ತಂಗಡಿ ತಾಲೂಕಿನ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸೇವಾಭಾರತಿಯ ಸೇವಾಚಟುವಟಿಕೆಗಳ ಕುರಿತು ಸಂಸ್ಥೆಯ ಅಧ್ಯಕ್ಷರು ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಹಾಗೂ ಸೇವಾಭಾರತಿ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ರವರು ಮಾಹಿತಿಯನ್ನು ನೀಡಿದರು ಕಾರ್ಯಗಾರದಲ್ಲಿ ಒಟ್ಟು 40 ಮಂದಿ ಭಾಗವಹಿಸಿದ್ದರು.

## ಸೇವಾನಿಧಿ ದಾನಿಗಳು

- ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
- ಶ್ರೀಮತಿ ತೇಜಾವತಿ, ಕನ್ಯಾಡಿ
- ಶ್ರೀ ಕೌಶಿಕ್ ಎಸ್ ರಾವ್, ಕನ್ಯಾಡಿ
- ಶ್ರೀಮತಿ ದಿವ್ಯಾ ಪುರಂದರ, ಬೆಂಗಳೂರು
- ಶ್ರೀ ಕೆ ಪುರಂದರ ರಾವ್, ನಾರ್ಯ
- ಶ್ರೀ ರಂಜಿತ್ ಕುಮಾರ್, ಪಟ್ರಮೆ
- ಶ್ರೀ ಕೃಷ್ಣಮೂರ್ತಿ ರಾವ್, ಕನ್ಯಾಡಿ
- ಶ್ರೀ ಲಕ್ಷ್ಮಣ ಸಪಲ್ಯ, ಉಜಿರೆ
- ಶ್ರೀಮತಿ ಜಯಂತಿ ಪುರಂದರ, ನಾರ್ಯ
- ಶ್ರೀ ನಿತಿನ್, ಉಜಿರೆ
- ಶ್ರೀ ಶ್ರೀಧರ ಕೆ ವಿ, ಉಜಿರೆ
- ಶ್ರೀ ಸ್ವರ್ಣಗೌರಿ, ಜೋಡುಸ್ಥಾನ
- ಶ್ರೀ ಗಣೇಶ್ ಭಟ್, ಉಜಿರೆ
- ಶ್ರೀ ಗೌರಿಶಂಕರ ರಾವ್, ಜೋಡುಸ್ಥಾನ
- ಶ್ರೀ ಸುಧಾಕರ್ ಪ್ರಭು, ಉಡುಪಿ
- ಶ್ರೀ ಪುರುಷೋತ್ತಮ ಡಿ ಎ, ಧರ್ಮಸ್ಥಳ
- ಶ್ರೀಮತಿ ಬಬಿತಾ, ಕನ್ಯಾಡಿ
- ಶ್ರೀ ರಾಮದಾಸ್ ಭಂಡಾರ್ಕರ್, ಉಜಿರೆ
- ಶ್ರೀ ಅಶೋಕ್, ಕೊಪ್ಪಳ
- ಶ್ರೀ ಶಿವಕುಮಾರ್, ಉಜಿರೆ
- ಶ್ರೀ ಮಧುಸೂಧನ್, ಉಜಿರೆ
- ಶ್ರೀ ಬಾಲಕೃಷ್ಣ ರಾವ್ ಕೆ, ಕನ್ಯಾಡಿ
- ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
- ಡಾ ರಾಮಕೃಷ್ಣ ಭಟ್ ಜಿ ಎನ್, ಕನ್ಯಾಡಿ
- ಶ್ರೀಮತಿ ಸವಿತಾ ಎಮ್ ರಾವ್, ಕನ್ಯಾಡಿ
- ಶ್ರೀ ಕೆ ರಮೇಶ್ ಪೂಜಾರಿ, ಕನ್ಯಾಡಿ
- ಶ್ರೀ ಲೋಕೇಶ್ ಪಿ, ಕನ್ಯಾಡಿ
- ಶ್ರೀ ಅಣ್ಣು ದೇವಾಡಿಗ, ಧರ್ಮಸ್ಥಳ
- ಶ್ರೀ ಕಾರ್ತಿಕ್ ಕೆ, ಧರ್ಮಸ್ಥಳ
- ಶ್ರೀ ಡಿ ಸುಬ್ರಮಣ್ಯ ಭಟ್, ಜೋಡುಸ್ಥಾನ
- ಶ್ರೀ ಡಿ ವಸಂತ ಭಟ್, ಜೋಡುಸ್ಥಾನ
- ಶ್ರೀ ಸುನಿಲ್ ಪಿ ಎನ್, ಕನ್ಯಾಡಿ
- ಶ್ರೀಮತಿ ಸವಿತಾ, ಉಡುಪಿ
- ಶ್ರೀ ಅಖಿಲೇಶ್ ಕೆ ಎಲ್, ಪುತ್ತೂರು
- ಶ್ರೀ ಸಂತೋಷ್, ಕೊಕ್ಕಡ
- ಶ್ರೀ ಪ್ರಿಜೇಶ್, ಧರ್ಮಸ್ಥಳ
- ಶ್ರೀ ದೀಕ್ಷಿತ್ ಎಂ, ನಿಡ್ಲೆ
- ಶ್ರೀ ಚೆನ್ನಕೇಶವ, ಕಡಿರುದ್ಯಾವರ
- ಶ್ರೀ ಬಿ ಪುರಂದರ, ನಾರ್ಯ
- ಶ್ರೀ ರಜತ್ ಕುಮಾರ್ ಜೆ ಡಿ, ವೇಣೂರು
- ಶ್ರೀ ಮೋಹನ್ ಕುಮಾರ್, ಮಂಗಳೂರು
- ಬೇಬಿ ವಿಹಾನ ಎಂ ಎಂ, ನಿಡ್ಲೆ
- ಶ್ರೀ ರಕ್ಷಿತ್ ಎಸ್ ಕುಲಾಲ್, ಬಡಗಕಾರಂದೂರು
- ಶ್ರೀಮತಿ ಮೀನಾಕ್ಷಿ ಜಿ ಭಟ್, ಜೋಡುಸ್ಥಾನ
- ಶ್ರೀ ಸುನಿಲ್ ಕುಮಾರ್ ಜೈನ್, ದೊಂಡೋಲೆ
- ಶ್ರೀ ಗಣೇಶ, ಮದ್ದಡ್ಕ
- ಶ್ರೀ ಪುಷ್ಪರಾಜ್, ಮಂಗಳೂರು
- ಶ್ರೀ ನೀಲಕಂಠ, ನಾರ್ಯ
- ಶ್ರೀ ಕೆ ಸೂರ್ಯನಾರಾಯಣ ರಾವ್, ದೊಂಡೋಲೆ
- ಶ್ರೀ ದೀಪಕ್ ಕುಮಾರ್, ಉಡುಪಿ

## ಮಹನೀಯ ದಾನಿಗಳು

- ಶ್ರೀ ಅವಿನಾಶ್ ಬಂಗೇರ, ಬಡಗಕಜೆಕಾರ್
- ಶ್ರೀಮತಿ ವಸಂತಿ ಕೆ, ಕನ್ಯಾಡಿ
- ಶ್ರೀ ವೆಂಕಟಗಿರಿ ಪಿ ಎಮ್, ಬೆಂಗಳೂರು
- ಶ್ರೀ ಕೆ ವಿನಾಯಕ ರಾವ್, ಕನ್ಯಾಡಿ
- ಶ್ರೀ ಶಶಾಂತ್, ಉಡುಪಿ
- ಶ್ರೀ ಸೂರಜ್ ಎಸ್ ಕುಲಾಲ್, ಕುಪ್ಪೆಪದವು
- ಶ್ರೀ ಮುರಲೀ ಕಡೆಕಾರ್, ಉಡುಪಿ
- ಶ್ರೀಮತಿ ತೇಜಾವತಿ, ಕನ್ಯಾಡಿ
- ಶ್ರೀ ರಕ್ಷಿತ್ ಕೆ, ಸುಳ್ಯ
- ಶ್ರೀಮತಿ ಪೂರ್ಣಿಮಾ ಕಿಣಿ, ದೊಂಡೋಲೆ
- ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
- ಶ್ರೀಮತಿ ಗಾಯತ್ರಿ ಕೇತನ್ ಪ್ರಧಾನ್, ಮುಂಬೈ
- ಶ್ರೀ ವಿನೋದ್
- ಶ್ರೀ ಅಜಿತ್
- ಶ್ರೀ ದಿನೇಶ್ ಪೂಜಾರಿ, ಕಡಿರುದ್ಯಾವರ
- ಮಾಸ್ಟರ್ ಪರೀಕ್ಷಿತ್ ಭಟ್, ದೊಂಡೋಲೆ
- ಶ್ರೀಮತಿ ಅನುರಾಧಾ ಎಮ್, ಸುಬ್ರಮಣ್ಯ
- ಶ್ರೀಮತಿ ಚೈತ್ರ ಎಮ್, ಜೋಡುಸ್ಥಾನ
- ಶ್ರೀ ಸುಬ್ರಮಣ್ಯ ಪ್ರಸಾದ್, ಜೋಡುಸ್ಥಾನ
- ಶ್ರೀ ಗಿರೀಶ್ ಎನ್, ಬೆಂಗಳೂರು
- ಶ್ರೀ ಪದ್ಮನಾಭ ಶೆಟ್ಟಿಗಾರ್, ಉಜಿರೆ
- ಶ್ರೀ ಜೆ ಗೋವಿಂದ ಆಚಾರ್, ಬಳ್ಳಾರಿ
- ಶ್ರೀ ಕಿರಣ್ ಕುಮಾರ್, ಕನ್ಯಾಡಿ

## ಸಂಘ ಸಂಸ್ಥೆಗಳು

- The Mani and Minoo Desai Charitable Trust, Maharastra
- G R Consulting, Bangalore

## ವಸ್ತು ರೂಪದಲ್ಲಿ ದೇಣಿಗೆ

- ಉಜಿರೆ ಹವ್ಯಕ ವಲಯ, ಉಜಿರೆ
- ಶ್ರೀಮತಿ ಮೀನಾಕ್ಷಿ ಜಿ ಭಟ್, ಜೋಡುಸ್ಥಾನ
- ಡಾ ಮಾಧವ ಶೆಟ್ಟಿ, ಗಂಗಾವತಿ

## ಉಡುಪಿ ಜಿಲ್ಲೆಯ DDWO ಬೈಂದೂರು ಸೇವಾಧಾಮಕ್ಕೆ ಭೇಟಿ




ಉಡುಪಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ(DDWO) ಶ್ರೀಮತಿ ರತ್ನಾ ರವರು ಬೈಂದೂರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಆಗಸ್ಟ್ 31 ರಂದು ಭೇಟಿ ನೀಡಿದರು. ಸಂಸ್ಥೆಯಲ್ಲಿ ನಿರ್ವಹಿಸಲಾಗುತ್ತಿರುವ ವಿವಿಧ ದಾಖಲೆ ಪುಸ್ತಕಗಳನ್ನು ಪರಿಶೀಲಿಸಿ, ಫಲಾನುಭವಿಗಳ ಪ್ರಗತಿ ವರದಿಗಳನ್ನು ವೀಕ್ಷಿಸಿ ಪರಿಶೀಲನೆ ನಡೆಸಿದರು. ಜೊತೆಗೆ, ಸಂಸ್ಥೆಯ ಕಾರ್ಯನಿರ್ವಹಣೆ ಹಾಗೂ ದಾಖಲೆ ನಿರ್ವಹಣೆಗೆ ಸಂಬಂಧಿಸಿದಂತೆ ಅಗತ್ಯ ಸಲಹೆ ಮತ್ತು ಸೂಚನೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಇಲಾಖೆಯ ಇತರ ಅಧಿಕಾರಿಗಳು ಹಾಗೂಸೇವಾಭಾರತಿಯ ಕಾರ್ಯದರ್ಶಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಬೈಂದೂರು ಸೇವಾಧಾಮದ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

# ಸೇವಾಧಾಮ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ಧನಸಹಾಯ ನೀಡುವಂತೆ ಮನವಿ





**2025ರಲ್ಲಿ ನೆಲ ಮಹಡಿಯ ಆಡಳಿತ ಕಚೇರಿ ಕಾರ್ಯಾರಂಭಗೊಂಡಿದ್ದು, ಪ್ರಸ್ತುತ ಅಲ್ಲಿಂದಲೇ ಸಂಸ್ಥೆಯ ಸೇವಾ ಚಟುವಟಿಕೆಗಳು ನಡೆಯುತ್ತಿವೆ. 2026ರಲ್ಲಿ August ಮೊದಲನೇ ಮಹಡಿಯ ಎಲ್ಲಾ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿದ್ದು, ಪೂಜಾ ಕಾರ್ಯಕ್ರಮವೂ ಯಶಸ್ವಿಯಾಗಿ ನೆರವೇರಿದೆ. ದಾನಿಗಳು ನಿಗದಿಪಡಿಸುವ ದಿನಾಂಕದಂದು ಮೊದಲನೇ ಮಹಡಿಯ ಉದ್ಘಾಟನಾ ಕಾರ್ಯಕ್ರಮವನ್ನು ನಡೆಸಲು ಕಾಯಲಾಗುತ್ತಿದೆ. ಎರಡನೇ ಮಹಡಿಯ ಪಿಲ್ಲರ್, ಸ್ಲ್ಯಾಬ್ ಹಾಗೂ ಮ್ಯಾಸನರಿ ಕಾಮಗಾರಿಗಳು ಪೂರ್ಣಗೊಂಡಿದ್ದು, ಪ್ರಸ್ತುತ ವಿದ್ಯುತ್ ವೈರಿಂಗ್ ಮತ್ತು ಪ್ಲಾಸ್ಟರಿಂಗ್ ಕಾಮಗಾರಿಗಳು ಪ್ರಗತಿಯಲ್ಲಿವೆ.**

**<u>ನಿರ್ಮಾಣ ಹಂತಗಳು:</u>**

**✅ 2024 – ಅಡಿಪಾಯ ಪೂರ್ಣ**
**✅ 2025 – ನೆಲಮಾಳಿಗೆ ನಿರ್ಮಾಣ ಪೂರ್ಣ**
**✅ 2025 – ನೆಲ ಮಹಡಿ ಹಾಗೂ ಆಡಳಿತ ಕಚೇರಿ ಕಾರ್ಯಾರಂಭ**
**✅ 2026 – ಮೊದಲನೇ ಮಹಡಿಯ ನಿರ್ಮಾಣ ಹಾಗೂ ಪೂಜಾ ಕಾರ್ಯಕ್ರಮ ಪೂರ್ಣ, ಮೊದಲನೇ ಮಹಡಿ ಉದ್ಘಾಟನೆಗೆ ಸಿದ್ಧತೆ**
**🚧 2026 – ಎರಡನೇ ಮಹಡಿಯ ಪಿಲ್ಲರ್, ಸ್ಲ್ಯಾಬ್ ಮತ್ತು ಮ್ಯಾಸನರಿ ಕಾಮಗಾರಿ ಪೂರ್ಣ; ವಿದ್ಯುತ್ ವೈರಿಂಗ್ ಹಾಗೂ ಪ್ಲಾಸ್ಟರಿಂಗ್ ಪ್ರಗತಿಯಲ್ಲಿದೆ.**
**ಇದುವರೆಗೆ ₹2,61,77,600/- ವೆಚ್ಚವಾಗಿದ್ದು, ಉಳಿದ ಮಹಡಿಗಳ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಇನ್ನಷ್ಟು ಆರ್ಥಿಕ ನೆರವಿನ ಅಗತ್ಯವಿದೆ**

ಸೇವಾಭಾರತಿ ಸಂಸ್ಥೆಯು ಕಳೆದ 21 ವರ್ಷಗಳಲ್ಲಿ ಸಾಮಾಜಿಕವಾಗಿ ಅನೇಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲಿಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ವೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. 2025 ರಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ನೆಲಮಹಡಿಗೆ Mangalore Refinery and Petrochemicals Limited (MRPL) ನಿಂದ ರೂ. 42 ಲಕ್ಷ ಮಂಜೂರಾಗಿ ಅದರಲ್ಲಿ ನೆಲಮಹಡಿಯ ಕಟ್ಟಡದ ನಿರ್ಮಾಣ ಸಂಪೂರ್ಣವಾಗಿ ಪೂರ್ಣಗೊಂಡು ಉದ್ಘಾಟನೆ ಆಗಿದೆ., ಹಾಗೂ NMPA CSR ಅನುದಾನದ ಅಡಿಯಲ್ಲಿ ಮೊದಲ ಮಹಡಿಯ ಪಿಲ್ಲರ್ ಹಾಗೂ ಸ್ಲ್ಯಾಬ್ ಕಾಮಗಾರಿ ಸಂಪೂರ್ಣವಾಗಿ ಪೂರ್ಣಗೊಂಡಿದ್ದು. LIC ಯ ರೂ. 40 ಲಕ್ಷ ಮಂಜೂರುಗೊಂಡಿರುವ ಕಾರಣ ಅತೀ ಶೀಘ್ರದಲ್ಲಿ ಈ ಮಹಡಿ ನಿರ್ಮಾಣಗೊಳ್ಳಲಿದೆ. ಪ್ರಸ್ತುತ ಇದೀಗ, ಎರಡನೇ ಮಹಡಿಯ ಕಾಮಗಾರಿ ಪ್ರಾರಂಭವಾಗಿದೆ.

ಬೇರೆ ಬೇರೆ CSR, ದಾನಿಗಳಿಗೆ, ಸಂಘ ಸಂಸ್ಥೆಗಳಿಗೆ ಸಹಕಾರವನ್ನು ಅಪೇಕ್ಷಿಸುತಿದ್ದೇವೆ. ನಿಯೋಜಿತ ಕಟ್ಟಡದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಉತ್ತಮ ಪುನಶ್ಚೇತನಕಾಗಿ ಫಿಸಿಯೋಥೆರಪಿ ವಾರ್ಡ್ ಕೇಂದ್ರಾಧಾರಿತ ಸೇವೆಗಾಗಿ ವಸತಿ (12 ಮಂದಿ ಮತ್ತು ಆರೈಕೆದಾರರಿಗೆ ವಸತಿ ವ್ಯವಸ್ಥೆ), ಅಡುಗೆ ಮತ್ತು ಊಟದ ಹಾಲ್ ದಿವ್ಯಾಂಗರಿಗೆ ಅನೇಕ ರೀತಿಯ ತರಬೇತಿ ವೈದ್ಯಕೀಯ ತಪಾಸಣೆಗಾಗಿ ಬಹು ಉದ್ದೇಶಿತ ಸಭಾಂಗಣ ಮತ್ತು ಪ್ರಧಾನ ಕಚೇರಿ ಹೊಂದಿರುವ ಈ ಕಟ್ಟಡ ಸಂಪೂರ್ಣ ದಿವ್ಯಾಂಗ ಸ್ನೇಹಿಯಾಗಿ ನಿರ್ಮಾಣವಾಗಲಿದೆ. ಈ ಕಟ್ಟಡ ಪೂರ್ತಿಯಾಗಿ ನಿರ್ಮಾಣಗೊಂಡಾಗ ಕರ್ನಾಟಕದಾದ್ಯಂತ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉತ್ತಮ ಸೇವೆಯನ್ನು ನೀಡುವ ಪುನಶ್ಚೇತನ ಕೇಂದ್ರವಾಗುತ್ತದೆ. ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ-ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

## BANK ACCOUNT DETAILS

SEVABHARATHI REGD

Scan and Pay also

| | | |
|---|---|---|
| A/c Holder | - | M/s. Sevabharathi(R) |
| A/c No | - | 120000400920 |
| Account Type | - | Current Account, Canara Bank Dharmasthala Branch |
| IFS Code | - | CNRB0010246 |

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

**ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.**



**ಶ್ರೀ ಹರೀಶ್ ಪೂಂಜಾ,** ಬೆಳ್ತಂಗಡಿ



**ಶ್ರೀ ಕ್ಯಾಪ್ಟನ್ ಬ್ರಿಜೇಶ್ ಚೌಟ**



**ಶ್ರೀಮತಿ ಸ್ವರ್ಣಗೌರಿ ,** ಜೋಡುಸ್ಥಾನ



**ಶ್ರೀ ಅವಿನಾಶ್,** ಕುಂದಾಪುರ



**ಶ್ರೀಮತಿ ಚೈತ್ರ** ಧರ್ಮಸ್ಥಳ



**ಮಾಸ್ಟರ್। ಧನ್ವಿ ಕುಮಾರ್,** ಧರ್ಮಸ್ಥಳ



**ಶ್ರೀ ಗಣೇಶ್ ಶೆಟ್ಟಿ ಮತ್ತು ಮಾಸ್ಟರ್ ಆರುಷ್ ಶೆಟ್ಟಿ ,** ಮದ್ದಡ್ಕ



**ಶ್ರೀ ಗಣೇಶ್ ವಿ ಶೆಂಡ್ಯೆ,** ಬಂಡಿಹೊಳೆ



**ಶ್ರೀ ಗಿರೀಶ್ ,** ಬೆಂಗಳೂರು



**ಶ್ರೀಮತಿ ಅನುರಾಧ ಎಂ,** ಸುಬ್ರಮಣ್ಯ



**ಶ್ರೀ ಮಾಧವ ಶೆಟ್ಟಿ** ಗಂಗಾವತಿ



**ಕು। ಪವನಿಕ ಬಿ ಕೆ ,** ಕನ್ಯಾಡಿ II



**ಶ್ರೀ ರೋಷನ್** ಬೆಲ್ಮನ್



**ಶ್ರೀ ಸರ್ವೋತ್ತಮ ಅಮೀನ್** ಉಡುಪಿ



**ಶ್ರೀ ಸುಕೇಶ್** ಅಡೂರು



**ಶ್ರೀಮತಿ ತೇಜಾವತಿ,** ಕನ್ಯಾಡಿ



**ಶ್ರೀ ವೆಂಕಟಗಿರಿ ಪಿ ಎಂ,** ಬೆಂಗಳೂರು



**ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ ಹಾಗೂ ಶ್ರೀಮತಿ ಮಂಜುಳಾ ವಿಷ್ಣುಪ್ರಸಾದ್ ,** ಉಡುಪಿ



**ಶ್ರೀ ಸೂರಜ್ ಎಸ್ ಕುಲಾಲ್,** ಕುಪ್ಪೆಪದವು



**ಬೇಬಿ। ದೇವರಾಜ್ ಚವಾಣ್,** ಮುಂಬೈ

## ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.


ಶ್ರೀ ಸಚಿನ್ ಕುಮಾರ್, ಕಲ್ಮಂಜ


ಬೇಬಿ ವಿಹಾನ ಎಂ ಎಂ , ನಿಡ್ಲೆ


ಶ್ರೀ ರಾಘವೇಂದ್ರ ಶಾಸ್ತ್ರಿ, ಕನ್ಯಾಡಿ


ಶ್ರೀ ಎಚ್ ಭೂಷಣ್ ಮೂಡುಶೆಡ್ಡೆ

## ಪುಣ್ಯಸ್ಮರಣೆ


ದಿ| ಎಚ್ ಬಿ ನಿರಂಜನ್ ಮೂರ್ತಿ, ಬೆಂಗಳೂರು

## ಬೈಂದೂರು ಮತ್ತು ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಆಗಸ್ಟ್ ತಿಂಗಳಲ್ಲಿ ಡಿಸ್ಚಾರ್ಜ್ ಆದವರು



ಶ್ರೀ ಅಕ್ಷತ್, ಬಂಟ್ವಾಳ



ಶ್ರೀ ಮಲ್ಲಿಕಾರ್ಜುನ, ಚಿಕ್ಕಮಗಳೂರು



ಶ್ರೀ ಗಣೇಶ್ ನಾಯ್ಕ್, ಉಡುಪಿ

## ನಿಮಗಿದು ತಿಳಿದಿರಲಿ

### ರಕ್ತ ಪರಿಚಲನೆ:

ಬೆನ್ನುಹುರಿಗೆ ಅಗತ್ಯವಾದ ಆಮ್ಲಜನಕ ಮತ್ತು ಪೋಷಕಾಂಶಗಳನ್ನು ರಕ್ತದ ಮೂಲಕ ಒದಗಿಸಲಾಗುತ್ತದೆ. ಮುಖ್ಯವಾಗಿ ಒಂದು Anterior Spinal Artery ಮತ್ತು ಎರಡು Posterior Spinal Arteries ಬೆನ್ನುಹುರಿಯ ವಿವಿಧ ಭಾಗಗಳಿಗೆ ಆಮ್ಲಜನಕಯುಕ್ತ ರಕ್ತವನ್ನು ಪೂರೈಸುತ್ತವೆ. ಈ ರಕ್ತನಾಳಗಳು ಬೆನ್ನುಹುರಿಯ ಆರೋಗ್ಯಕರ ಕಾರ್ಯನಿರ್ವಹಣೆಗೆ ಪ್ರಮುಖವಾಗಿವೆ.

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ,

**ಸೇವಾಪಥ** : ಮಾಸಿಕ ಈ-ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು** : ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್ ಕೇರ್ & ಮೆಡಿಕಲ್ ಕಿಟ್ ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

ರೂ. 2000/ - ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್ ಗಳಿಗಾಗಿ ಸಹಕಾರ.

ರೂ. 3,000/ - ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ

ರೂ. 4,500/ - ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ

ರೂ. 10,000/ - ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ

ರೂ. 10,000/- ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು

ರೂ. 15,000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ

ರೂ. 18,000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ

## DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

## Support us for constructions of Rehabilitation Centre

SEVABHARATHI REGD

A/c Holder - M/s. Sevabharathi(R)
A/c No - 120000400920
Account Type - Current Account Canara Bank Dharmasthala Branch
IFS Code - CNRB0010246

# ಸೋಲಿನಲ್ಲೂ ಗೆಲುವಿನ ಹಾದಿಯನ್ನು ಕಂಡುಕೊಂಡಂತಹ ಚಿಕ್ಕಮಗಳೂರಿನ ಶ್ರೀ ಕೃಷ್ಣ ಶೆಟ್ಟಿಯವರ ಯಶೋಗಾಥೆ



ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ತೆಂಗಿನಮನೆ ಗ್ರಾಮದ ನಿವಾಸಿಯಾದ ಶ್ರೀ ಕೃಷ್ಣ ಶೆಟ್ಟಿಯವರು , ದಿ. ಚಂದ್ರಶೇಖರ ಶೆಟ್ಟಿ ಹಾಗೂ ಶ್ರೀಮತಿ ಸುಶೀಲಾ ದಂಪತಿಯ ಪುತ್ರನಾಗಿ ಜನಿಸಿದರು. ಬಾಲ್ಯದಲ್ಲಿಯೇ ಬಡತನದ ಪರಿಸ್ಥಿತಿಯನ್ನು ಎದುರಿಸಿದ ಕೃಷ್ಣ ಶೆಟ್ಟಿಯವರ ವಿದ್ಯಾಭ್ಯಾಸವು ನಾಲ್ಕನೇ ತರಗತಿಯಲ್ಲಿಯೇ ಅಂತ್ಯಗೊಂಡಿತು. ನಾರ್ವಾದ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಾಲ್ಕನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ ಅವರು, ಕುಟುಂಬದ ಆರ್ಥಿಕ ಪರಿಸ್ಥಿತಿಯ ಕಾರಣದಿಂದ ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ಬಾಲ್ಯದಲ್ಲಿಯೇ ಕೆಲಸಕ್ಕೆ ತೆರಳಿ, ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಾ ತಮ್ಮ ಜೀವನವನ್ನು ಸಾಗಿಸಲು ಆರಂಭಿಸಿದರು.

ಜೀವನದಲ್ಲಿ ಯಾವುದಾದರೂ ಒಂದು ವೃತ್ತಿಯನ್ನು ಮಾಡಿಕೊಂಡು ಸ್ವಾವಲಂಬಿಯಾಗಿ ಬದುಕಬೇಕು ಎಂಬ ಉದ್ದೇಶದಿಂದ ಅವರು ತೆಂಗಿನ ಮರಗಳಿಂದ ಕಾಯಿಗಳನ್ನು ತೆಗೆಯುವ ಕೆಲಸವನ್ನು ಆರಂಭಿಸಿದರು. ಕಷ್ಟಕರವಾದ ಕೆಲಸವಾದರೂ ಅದನ್ನೇ ತಮ್ಮ ಜೀವನೋಪಾಯವನ್ನಾಗಿ ಮಾಡಿಕೊಂಡು ಧೈರ್ಯದಿಂದ ಜೀವನ ನಡೆಸುತ್ತಿದ್ದರು.

ಆದರೆ 2025ರ ಡಿಸೆಂಬರ್ 29 ಅವರ ಜೀವನದಲ್ಲಿ ಮರೆಯಲಾಗದ ದಿನವಾಯಿತು. ಅಂದು ಎಂದಿನಂತೆ ತೆಂಗಿನಕಾಯಿ ತೆಗೆಯುವ ಕೆಲಸಕ್ಕೆ ತೆರಳಿದ್ದ ಸಂದರ್ಭದಲ್ಲಿ, ಸುಮಾರು 60 ಅಡಿ ಎತ್ತರದ ತೆಂಗಿನ ಮರದಿಂದ ಆಕಸ್ಮಿಕವಾಗಿ ಬಿದ್ದು, ಗಂಭೀರವಾದ ಬೆನ್ನುಹುರಿ ಅಪಘಾತಕ್ಕೆ ಒಳಗಾದರು. ಆ ಒಂದು ಘಟನೆ ಅವರ ಜೀವನದ ದಿಕ್ಕನ್ನೇ ಬದಲಿಸಿತು. ತಕ್ಷಣ ಅವರನ್ನು ಪ್ರಾಥಮಿಕ ಚಿಕಿತ್ಸೆಗಾಗಿ ಕೊಪ್ಪದ ಪ್ರಶಮನಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಹೆಚ್ಚಿನ ಚಿಕಿತ್ಸೆಯ ಅಗತ್ಯವಿದ್ದ ಕಾರಣ ಅವರನ್ನು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಅಲ್ಲಿ ಶಸ್ತ್ರಚಿಕಿತ್ಸೆ ಸೇರಿದಂತೆ ಅಗತ್ಯ ವೈದ್ಯಕೀಯ ಚಿಕಿತ್ಸೆಯನ್ನು ಪಡೆಯಬೇಕಾದ ಪರಿಸ್ಥಿತಿ ಎದುರಾಯಿತು.

ಅಪಘಾತದ ಪರಿಣಾಮವಾಗಿ ತಮ್ಮ ದೈಹಿಕ ಸ್ಥಿತಿಯಲ್ಲಿ ದೊಡ್ಡ ಬದಲಾವಣೆ ಸಂಭವಿಸಿದೆ ಎಂಬ ಸಂಪೂರ್ಣ ಅರಿವು ಕೃಷ್ಣ ಶೆಟ್ಟಿಯವರಿಗೆ ಆರಂಭದಲ್ಲಿ ಇರಲಿಲ್ಲ. ಕುಟುಂಬದವರಿಗೆ ಪರಿಸ್ಥಿತಿಯ ಅರಿವಿದ್ದರೂ, ಅವರ ಮನಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಈ ವಿಷಯವನ್ನು ತಕ್ಷಣ ಅವರಿಗೆ ತಿಳಿಸಲಾಗಿರಲಿಲ್ಲ.

ಸುಮಾರು ಆರು ತಿಂಗಳ ನಂತರ, ಕುಟುಂಬದವರು ವಾಸ್ತವ ಸ್ಥಿತಿಯನ್ನು ಅವರಿಗೆ ತಿಳಿಸಿದರು. “ಇನ್ನು ಮುಂದೆ ಸ್ವತಂತ್ರವಾಗಿ ನಡೆಯಲು ಸಾಧ್ಯವಾಗದೇ, ಗಾಲಿಕುರ್ಚಿಯ ಸಹಾಯದಿಂದಲೇ ಜೀವನ ಸಾಗಿಸಬೇಕಾಗಬಹುದು” ಎಂಬ ವಿಷಯವನ್ನು ಅವರು ತಿಳಿದುಕೊಂಡಾಗ, ಸಹಜವಾಗಿಯೇ ಅವರು ತೀವ್ರ ಆಘಾತಕ್ಕೆ ಒಳಗಾದರು. ಆದರೆ ಆ ಆಘಾತವೇ ಅವರ ಅಂತ್ಯವಾಗಲಿಲ್ಲ. ವಾಸ್ತವವನ್ನು ಅರ್ಥಮಾಡಿಕೊಂಡ ಕೃಷ್ಣ ಶೆಟ್ಟಿಯವರು ನಿಧಾನವಾಗಿ ಪರಿಸ್ಥಿತಿಯನ್ನು ಸ್ವೀಕರಿಸಿ, “ನನ್ನ ಜೀವನ ಇಲ್ಲಿಗೇ ಮುಗಿದಿಲ್ಲ” ಎಂಬ ಮನೋಭಾವದಿಂದ ಮುಂದೆ ಸಾಗಲು ನಿರ್ಧರಿಸಿದರು.

ನಂತರ ತೀರ್ಥಹಳ್ಳಿಯಲ್ಲಿ ಆಯುರ್ವೇದ ಚಿಕಿತ್ಸೆಯನ್ನು ಪಡೆದು ಚೇತರಿಸಿಕೊಳ್ಳಲು ಪ್ರಯತ್ನಿಸಿದರು. ಯಾವುದೇ ವಿಶೇಷ ಪುನಶ್ಚೇತನ ಸೇವೆಯ ಸಹಾಯವಿಲ್ಲದಿದ್ದರೂ, ತಮ್ಮ ಸ್ವಂತ ಪ್ರಯತ್ನ ಮತ್ತು ದೃಢನಿಶ್ಚಯದಿಂದ ದೈಹಿಕವಾಗಿ ಚೇತರಿಸಿಕೊಳ್ಳಲು ನಿರಂತರ ಪ್ರಯತ್ನಿಸಿದರು. ಸ್ಟಿಕ್ ನ ಸಹಾಯದಿಂದ ಹೆಜ್ಜೆ ಇಡಲು ಆರಂಭಿಸಿ, ದಿನದಿಂದ ದಿನಕ್ಕೆ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಶ್ರಮಿಸಿದರು.

ಅವರು ಒಂದೇ ವಿಚಾರವನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದರು: “ಹೀಗೆ ಕುಳಿತುಕೊಂಡರೆ ಜೀವನ ಸಾಗುವುದಿಲ್ಲ. ನಾನು ಏನಾದರೂ ಮಾಡಬೇಕು.” ಈ ಆಲೋಚನೆಯಿಂದ ಅವರು ಸ್ವಂತವಾಗಿ ಒಂದು ಹೋಟೆಲ್ ಮತ್ತು ಅಂಗಡಿಯನ್ನು ಆರಂಭಿಸುವ ಪ್ರಯತ್ನ ಮಾಡಿದರು. ಆದರೆ ನಿರೀಕ್ಷಿಸಿದಂತೆ ವ್ಯವಹಾರ ನಡೆಯದೆ ಹೆಚ್ಚಿನ ನಷ್ಟ ಉಂಟಾದ ಕಾರಣ, ಕೊನೆಗೆ ಅದನ್ನು ಮುಚ್ಚಬೇಕಾಯಿತು.

ಆದರೂ ಆ ಸೋಲು ಕೂಡ ಅವರ ಆತ್ಮವಿಶ್ವಾಸವನ್ನು ಕುಗ್ಗಿಸಲಿಲ್ಲ.“ಅರ್ಧ ದಾರಿಯಲ್ಲಿ ಕೈಬಿಡಬಾರದು. ನಾನು ಮತ್ತೆ ಆರಂಭಿಸಬೇಕು.” ಎಂಬ ದೃಢವಾದ ಮನೋಭಾವವನ್ನು ಅವರು ಉಳಿಸಿಕೊಂಡರು.ಇಂದು ಅವರು ಕೆಲವೊಂದು ಅಂಗಡಿಗಳಲ್ಲಿ ಹೆಲ್ಪರ್ ಆಗಿ ಕೆಲಸ ಮಾಡುತ್ತಾ, ತಮ್ಮ ಜೀವನವನ್ನು ಮತ್ತೆ ಕಟ್ಟಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಕೃಷ್ಣ ಶೆಟ್ಟಿಯವರ ಜೀವನವು ಕೇವಲ ಒಂದು ಅಪಘಾತದ ಕಥೆಯಲ್ಲ. ಅದು ಬಡತನದ ನಡುವೆಯೂ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನ, ಆಕಸ್ಮಿಕವಾಗಿ ಎದುರಾದ ಬೆನ್ನುಹುರಿ ಅಪಘಾತ, ಆಘಾತದ ನಡುವೆಯೂ ವಾಸ್ತವವನ್ನು ಸ್ವೀಕರಿಸುವ ಮನಸ್ಥಿತಿ, ಸೋಲಿನ ನಂತರವೂ ಮತ್ತೆ ಎದ್ದು ನಿಲ್ಲುವ ಧೈರ್ಯ ಮತ್ತು ಸ್ವಾವಲಂಬನೆಯತ್ತ ಸಾಗುವ ನಿರಂತರ ಅವರ ಪ್ರಯತ್ನ ಅವರನ್ನು ಯಶಸ್ಸಿನ ದಾರಿಗೆ ಕರೆದುಕೊಂಡು ಹೋಗಿದೆ.ಎಂಬುದಕ್ಕೆ ಇವರ ಕಥೆಯೇ ಮಾದರಿ. .

**ಶುಭಹಾರೈಸಲು ಸಂಪರ್ಕಿಸಿ : 9482451246**